ಕಾನನ

April 2011

ನಿಸರ್ಗದೆಡೆಗೆ ಪಯಣ



WILDLIFE CONSERVATION GROUP



ಕಾನನ

ನಿಸರ್ಗದೆಡೆಗೆ ಪಯಣ

April 2011

ಲೇಖನಗಳು

ಅನಿಸಿಕೆಗೆ
E-mail: kaanana.mag@gmail.com

ಮುಖಪುಟ : ಡ್ಯಾಂಡಲಿನ್ ಹೂವು.



ಸಂಪಾದಕೀಯ

ಪ್ರಿಯ ಓದುಗರೇ. . . .

ಈ ತಿಂಗಳ ಸಂಚಿಕೆಯು ಕಾರಣಾಂತರಗಳಿಂದ ತಡವಾಗಿ ಪ್ರಕಟವಾಗುತ್ತಿದೆ, ಎಂದಿನಂತೆ ಹಕ್ಕಿಲೋಕ ಅಂಕಣದಲ್ಲಿ ನಾಗೇಶ್‌ರವರ 'ಹಸಿರು ಜೇನ್ನೊಣಬಾಕ' ಪಕ್ಷಿಯ ಬಗ್ಗೆ ಸರಳ ಸುಂದರವಾಗಿ ವರ್ಣಿಸಿದರೆ, ಹಸಿರು ಜೇನ್ನೊಣಬಾಕ (ಗ್ರೀನ್ ಬೀ-ಈಟರ್) ಜೀವನ ಮತ್ತು ಅದರ ಆಹಾರ ಪದ್ದತಿ, ಗೂಡು, ಮೊಟ್ಟೆ, ಮರಿಗಳ ಬಗ್ಗೆ ಮತ್ತು ಸುಂದರವಾದ ಛಾಯಾಚಿತ್ರಗಳಿಂದ ವರ್ಣನೆಯಾಗಿದೆ.

ಅದೇ ರೀತಿ ಈ ಸಂಚಿಕೆಯಲ್ಲಿ ಕೆ.ಪಿ.ಶಂಕರಪ್ಪರವರ 'ಚಿರತೆ ಬೇಟೆ *ಮಂಯ್ಯೋ ಮಂಯ್. ಬಾ-ಇತ್ತಾ. . . .!'* ಎಂಬ ಸಣ್ಣಕತೆಯನ್ನು ಬರೆದಿದ್ದರೆ, ಜೋಡಿ ನಳಿಗೆ ಲೈಸನ್ಸ್ ಗನ್ನಿನ ಒಡೆಯನಾದ ಮರಿಗನ ಬದುಕು ಮತ್ತು ಅವನ ಎಮ್ಮೆಗಳ ಸಹಸ, ಕಾಡಿನ ಮರಿಗನ ಅಲೆದಾಟ, ಮರಿಗನ ಎಮ್ಮೆಗಳು ಕಾಡಿನಲ್ಲಿ ಚಿರತೆಯನ್ನು ಕೊಂದಿದ್ದು, ಮತ್ತೆ ಅವನ ಎಮ್ಮೆಗಳ ಕೂಗನ್ನೇ ಹೋಲುವ ಅವನ ಬಾಷೆ *ಮಂಯ್ಯೋ ಮಂಯ್. ಬಾ-ಇತ್ತಾ. . . .! ಎಂಬ ಶಬ್ಧಗಳನ್ನು ಸುಂದರವಾಗಿ ಚಿತ್ರಿಸಿದರೆ.* ಎಷ್ಟೋ ಬಾರಿ ವೀಕೆಂಡ್ಗಳಲ್ಲಿ ಬೇಗಳ್ಳೀ ಬಿಲ್ಡಿಂಗ್ ಮನೆಯಲ್ಲಿ ವಾಸವಿರೋ. ಕಪ್ಪಗೆ ಕುಳ್ಳಗಿರುವ ಧಾರವಾಡದ ಕಡೆಯ ಸಾಫ್ಟ್‌ವೇರ್ ಇಂಜಿನಿಯರಮ್ಮನು ತನ್ನ ರೆಫುನ್ ಕಾರಿನಲ್ಲಿ ಚಿಕ್ಕ ಮಕ್ಕಳೊಂದಿಗೆ ಬಂದು, ಮಕ್ಕಳಿಗೆ "ದಿಸ್ ಈಸ್ ಬಫೇಲೊ" ಎಂದು ತೋರಿಸಿ ಎಲ್ಡೆಲ್ಡು ಲೀಟ್ರು ಹಾಲು ತಕ್ಕೊಂಡು ಹೋಗ್ತಾಳೆ ಅಂದ್ರೇ, ಮರಿಗನ ಹಾಲಿನ ವ್ಯಾಪರ ಎಷ್ಟರ ಮಟ್ಟಿಗೆ ಇರಬೇಕು ನೀವೆ ಹೇಳಿ. . .! ಪ್ರತಿಯೊಂದನ್ನು ಸರಳವಾಗಿ ಅರ್ಥಬದ್ದವಾಗಿ ಚಿತ್ರಮಾಡಿಸಿರುವ ಈ ಸಣ್ಣಕತೆಯನ್ನು ಓದೇ ತಿಳಿಯಬೇಕು ಬಿಡಿ. ಹಾಗೇ ಅಶ್ವಥ್.ಕೆ.ಎನ್.ರವರ "ಬೆಟ್ಟದ ಮಲ್ಲಿಗೆ" ಎಂಬ ಕವನವೂ ಸಹ ಸುಂದರವಾಗಿ ಮೂಡಿ ಬಂದಿದೆ.

ಪ್ರಕೃತಿಯ ಬಗ್ಗೆ ಅರಿವು ಮೂಡಿಸುವ ನಮ್ಮ ಪುಟ್ಟ ಪತ್ರಿಕೆಯನ್ನು ನೀವೂ ಓದಿ ಹಾಗು ನಿಮ್ಮ ಸ್ನೇಹಿತರಿಗೂ ಕಳಿಸಿ. ಕಾನನ ನಿಮ್ಮಿಂದಲೂ ಲೇಖನ , ಪ್ರವಾಸ ಕಥನ, ಛಾಯಾಚಿತ್ರ, ಕವನಗಳನ್ನು ಆಶಿಸುತ್ತದೆ.

kaanana.mag@gmail.com



ಹಕ್ಕಿಲೋಕ

ಜೇನುಹುಳುವು ತನ್ನನ್ನು ಮತ್ತು ತನ್ನ ಕುಟುಂಬವನ್ನು ವೈರಿಗಳಿಂದ ರಕ್ಷಿಸಿಕೊಳ್ಳಲು ತನ್ನಲ್ಲಿ ಒಂದು ವಿಶೇಷವಾದ ರಾಸಾಯನಿಕವನ್ನು ಸಂಗ್ರಹಿಸಿಟ್ಟುಕೊಂಡಿರುತ್ತದೆ. ಯಾವುದೇ ವೈರಿ ತನಗೆ ತೊಂದರೆ ನೀಡಿದಾಗ ತನ್ನ ವಿಷಪೂರಿತ ಕೊಂಡಿಯಿಂದ ಚುಚ್ಚಿ ವೈರಿಯ ದೇಹಕ್ಕೆ ಕಳುಹಿಸುತ್ತದೆ. ಇದು ಎಷ್ಟು ನೆವೆ ಮತ್ತು ನೋವನ್ನು ಉಂಟುಮಾಡುತ್ತದೆಂದರೆ ಆ ನೋವನ್ನು ಸಹಿಸಲಾಗದೆ ಯಾವುದೇ ಜೀವಿಯಾದರೂ ಕಾಲಿಗೆ ಬುದ್ಧಿ ಹೇಳುವುದಂತು ಗ್ಯಾರಂಟಿ. ಆದರೂ ಈ ಹುಳುಗಳಿಗೆ ವೈರಿಗಳೇ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಈ ಜೇನುಹುಳುಗಳು ಎಷ್ಟೇ ಸಾಹಸಪಟ್ಟರು ಕೆಲವು ಜಾತಿಯ ಪ್ರಾಣಿಗಳು ಕಚ್ಚಿಸಿಕೊಂಡಾದರೂ ಜೇನಿನ ರುಚಿಯನ್ನು ಸವಿಯದೇ ಬಿಡುವುದಿಲ್ಲ, ಅದರಲ್ಲೂ ಕರಡಿಗಳು ಎಷ್ಟೇ ಕಷ್ಟವಾದರು ಜೇನಿನ ಗೂಡಿನಿಂದ ಸ್ವಲ್ಪ ಜೇನನ್ನಾದರೂ ಕದಿಯದೇ ಹಿಂದಿರುಗುವುದಿಲ್ಲ. ಈ ಜೇನು ಹುಳುಗಳಿಗೆ ಪ್ರಾಣಿಗಳಿಗಿಂತ ದೊಡ್ಡ ವೈರಿ ಎಂದರೆ ಒಂದು ಜಾತಿಯ ಪಕ್ಷಿ, ಈ ಪಕ್ಷಿಯು ತನಗೆ ಯಾವ ತೊಂದರೆಯೂ ಆಗದಂತೆ ಈ ಜೇನುಹುಳುಗಳನ್ನು ಕೊಂದು ತಿನ್ನುತ್ತದೆ. ಈ ಪಕ್ಷಿಯು ಜೇನು ಹುಳುವನ್ನು ಕೊಲ್ಲಲು ಉಪಯೋಗಿಸುವ ಚಾಣಾಕ್ಷತನವು ನಿಜಕ್ಕೂ ಆಶ್ಚರ್ಯಮೂಡಿಸುವಂತದು! ಜೇನುನೊಣವನ್ನು ಕಂಡಾಕ್ಷಣ ಈ ಪಕ್ಷಿಯು ಅದನ್ನು ತನ್ನ ಕೊಕ್ಕಿನಿಂದ ಹಿಡಿದು ಮೊದಲು ಅದು ಕಚ್ಚಲು ಉಪಯೋಗಿಸುವ ಅಸ್ತ್ರವನ್ನು ಹತ್ತಿರದಲ್ಲಿರುವ ತಂತಿಗೋ ಅಥವಾ ಮರದ ಕೊಂಬೆಗೋ ಉಜ್ಜಿ ಕಿತ್ತುಹಾಕಿ ನಂತರ ನಿಧಾನವಾಗಿ ನುಂಗುತ್ತದೆ.

ಈ ಪಕ್ಷಿಗಳ ಮುಖ್ಯ ಆಹಾರ ಜೇನುಹುಳುಗಳಾಗಿರುವುದರಿಂದ ಇದನ್ನು “ಜೇನ್ನೊಣಬಾಕ” ಎಂದೇ ಕರೆಯುತ್ತಾರೆ. ಜೇನ್ನೊಣಬಾಕಗಳು ಮರಿಮಾಡಲು ನದಿಯದಂಡೆ, ಬಯಲು ಪ್ರದೇಶಗಳಲ್ಲಿ ಗುಂಪಾಗಿ ಸೇರಿತ್ತವೆ. ಒಂದೊಂದು ಜೊತೆ ಗಂಡು–ಹೆಣ್ಣುಗಳು ಉದ್ದವಾದ ಇಲಿಯ ಬಿಲದಂತಹ ಕೊಳವೆಯನ್ನು ಕೊರೆದು ಅದರಲ್ಲಿ ಐದರಿಂದ ಆರು ಮೊಟ್ಟೆಯನ್ನು ಇಟ್ಟು ಮುವ್ವತ್ತು ದಿನಗಳೊಳಗೆ ಮರಿಮಾಡಿಸುತ್ತವೆ. ಇವುಗಳಿಗೆ ಮರಿಮಾಡಲು ಹತ್ತಿರದಲ್ಲಿ ಸೂಕ್ತವಾದ ಸ್ಥಳ ಸಿಕ್ಕದಿದ್ದರೆ ಬೇರೆ ಜಾಗಗಳನ್ನು ಹುಡುಕಿಕೊಂಡು ವಲಸೆ ಹೋಗುವುದೂ ಉ0ಟು.



Green Bee-beater **ಹಸಿರು ಜೇನ್ನೊಣಬಾಕ** *Merops orientalis*



ಚಿರತೆ ಬೇಟೆ

ವಂಸ್ಯೋ ವಂಸ್. ಬಾ-ಇತ್ತಾ. . . .!

ಜೋಡಿ ನಳಿಗೆ ಲೈಸನ್ಸ್ ಗನ್ನಿನ ಒಡೆಯನಾದ ಮರಿಗನು, ಎಮ್ಮೆ ಸಾಕಾಣಿಕೆಗೆ ಫೇಮಸ್ಸು! ಸುತ್ತಾ ಹೋಬಳಿಯಲ್ಲೇ ಎಲ್ಲೂ ಬೀಜದ ಎಮ್ಮೆಕೋಣ ಇಲ್ಲದಿರುವುದರಿಂದ, ಸುತ್ತಮುತ್ತಲ ಊರಿನ ಸಕಲ ಸಾಬರ ಕಿಲಸ್ತರ ಎಲ್ಲರ ಎಮ್ಮೆಗಳಿಗೂ, ಮರಿಗನ ಕೋಣವೇ ಗತಿ. ಬೆದೆಗೆ ಬಂದ ಎಮ್ಮೆಗಳಿಗೆ ಕೋಣ ಬಿಡಲು ಇವನು ಕಾಸು ಕೇಳುವವನಲ್ಲಾ. ಉಧಾರಿ! ಅವರೇ ಏನಾದರೂ ಬಲವಂತ ಮಾಡಿ ಕೊಟ್ಟರೆ, ಇಸಿಕೊಳ್ಳುತ್ತಾನೆ.



ಮರಿಗನ ಮನೆಯಲ್ಲಿ ಇವರಪ್ಪನ ಕಾಲದಿಂದಲೂ ಎಮ್ಮೆಗಳ ಬೆಟಾಲಿಯನ್ನೇ ಇದೆ. ಇವನೇ ಮನೆಮನೆಗೂ ವರ್ತನೆಯಲ್ಲಿ ಎಮ್ಮೆಹಾಲು ಹಾಕುತ್ತಾನಾದರೂ, ಎಷ್ಟೋ ಬಾರಿ ವೀಕೆಂಡ್ಗಳಲ್ಲಿ ಬೇಗಳ್ಳಿಲೀ ಬಿಲ್ಡಿಂಗ್ ಮನೆಯಲ್ಲಿ ವಾಸವಿರೋ. ಕಪ್ಪಗೆ ಕುಳ್ಳಗಿರುವ ಧಾರವಾಡದ ಕಡೆಯ ಸಾಪ್ಟ್ವೇರ್ ಇಂಜಿನಿಯರಮ್ಮನು ತನ್ನ ರೈಘುನ್ ಕಾರಿನಲ್ಲಿ ಚಿಕ್ಕ ಮಕ್ಕಳೊಂದಿಗೆ ಬಂದು, ಮಕ್ಕಳಿಗೆ “ದಿಸ್ ಈಸ್ ಬಫೇಲೊ” ಎಂದು ತೋರಿಸಿ ಎಲ್ಡೆಲ್ಡು ಲೀಟ್ರು ಹಾಲು ತಕ್ಕೊಂಡು ಹೋಗ್ತಾಳೆ ಅಂದ್ರೇ, ನೀವೆ ಊಹಿಸಿಕೊಳ್ಳಿ ಎಮ್ಮೆ ಹಾಲಿನ ರುಚಿ!.

ಮರಿಗನ ಮನೆಯ ಎಮ್ಮೆಗಳ ಗುಂಪು, ಮೊನ್ನೇ ಚಂದಾಪುರದ ಶನಿವಾರ್ಸಂತೆಯಿಂದ ಹೊಸದಾಗಿ ಕೊಂಡು ತಂದ ಕಾಮಾನು ಕೊಂಬಿನ ಹೊಸೆಮ್ಮೆಯನ್ನು ಯಾಕೋ ಗುಂಪಿಗೆ ಸೇರಿಸಿಕೊಳ್ಳುತ್ತಿಲ್ಲಾ. ಹೊಸೆಮ್ಮೆಯನ್ನು ಕಂಡರೆ ಯಾವ ಎಮ್ಮೇಗೂ ಆಗದು. ಗುಂಪಾಗಿ ಮೇಯುವಲ್ಲಿ ಬಂದರೆ ಗುಮ್ಮಿ ಗುಟುರುಹಾಕಿ ಹಿಂದಿಕ್ಕುತ್ತಿದ್ದರಿಂದ ಪಾಪ ಹೊಸೆಮ್ಮೆ, ಶಾಲೆಗೆ ಹೊಸದಾಗಿ ಸೇರಿದ ಬಾಲಕನಂತೆ ಗುಂಪಿನಿಂದ ಬೇರೆಯೇ ಉಳಿದು ಕಡೆ ಕಡೆಯಲ್ಲೇ ಒಂಟಿಯಾಗಿ ಮೇದು ಕಾಲ ತಳ್ಳುತ್ತಿತ್ತು.

ಬೇಸಿಗೆಕಾಲ ಸುಡುಸುಡು ಬಿಸಿಲು, ಕಾಡಲ್ಲಿದ್ದ ಸಕಲ ಜಾತಿಯ ಹುಲ್ಲುಗಂಟೆಗಳೂ ಬೆಂಕಿಗೆ ಹಾವುತಿಯಾಗಿ ಮೇವಿಲ್ಲದೇ ನೀರಿಲ್ಲದೇ ಕಪ್ಪುಮರುಭೂಮಿಯಂತೆ ಆಗಿತ್ತು. ಈ ಎಮ್ಮೆಗಳೋ ಬಿಸಿಲಿನ ಝಳಕ್ಕೆ ಒಂದು ಕ್ಷಣವೂ ತಾಳದೇ ಹಾವುಬಂಡೆಯ ಹಳ್ಳದ ನೀರಿನಲ್ಲಿ ಹಾಯಾಗಿ ಮಲಗಿದವೆಂದರೆ, ಸೂರ್ಯ ಕೆಳಗಿಳಿದ ಮೇಲೇನೇ ಅವು ನೀರಿನಿಂದಾಚೆಗೆ ಬರುವುದು ಎಂದು ಮರಿಗನಿಗೆ ಚೆನ್ನಾಗಿ ಗೊತ್ತು.

ಜಾನುವಾರುಗಳನ್ನು ಕಾಡಲ್ಲಿ ಮೇಯಿಸಲು ಬಿಡುವುದಿಲ್ಲವಾದರೂ ಮರಳುಪಾರ್ಟಿ ಎಂದು ಹೆಸರಾಗಿರುವ ಮರಿಗನ ಮಾತಿಗೆ ಆ ಬೀಟಿನ ಎಲ್ಲಾ ಪಾರೆಸ್ಟ್ ವಾಚರ್‌ಗಳೂ ಇವನಿಗೆ ಮರುಳಾಗಿದ್ದಾರೆ. ಒಂದು ವೇಳೆ ಫಾರೆಸ್ಟ್ ರೈಂಜರು ಮುಂದೆನೇ ಕಾಡಿನಲ್ಲಿ ಎಮ್ಮೆಗಳು ರೆಡ್ ಯ್ಯಾಂಡಾಗಿ ಸಿಕ್ಕಾಕಿಕೊಂಡ್ರು, ಮರಿಗನನ್ನು ವಾಚರ್ ಗಳು ಬಹಳವಾಗಿ ಬೈದರೂ ಅವರವರ ಮನದಲ್ಲಿ ಮಾತ್ರ ಇಬ್ಬರೂ ಒಂದೇ!.

ಪ್ರತಿದಿನದಂತೆ ಬೆಳಿಗ್ಗೆ ಕಾಡಿಗೆ ಹೊಡೆದ ಎಮ್ಮೆಗಳನ್ನು ತಿರವಿಕೋ ಬರಲು ಹಾವುಬಂಡೆಯ ಹಳ್ಳದ ಜಂಡುಲ್ಲು ಬಯಲಿನ ಕಡೆಗೆ ಹೊರಟ ಜೋಡಿ ಮಕ್ಕಳ ತಂದೆ ಮರಿಗನಿಗೆ ಗಾಚಾರವೇ ಕಾದಿತ್ತು.

ಕಾಲುದಾರಿಯಲ್ಲಿ ನಡೆಯುವಾಗಲೇ ಉತ್ಪತ್ತಿಗಳು ಎಡೆಬಿಡದೆ

“ಉತ್ಪೂತ್ತೇ. . . ಉತ್ಪೂತ್ತೇ. . . . .

ಉಫ್ ಉಫ್ ಉಫ್. . ಉತ್ಪೂತ್ತೇ. . .”

ಎಂದು ಬಾಯಿ ಬಡೆದು ಕೊಳ್ಳುತ್ತಿದ್ದವು. ದೂರದಿಂದಲೇ ಎಮ್ಮೆಗಳು ಉಸಿರಾಡುವ ಸದ್ದು ಜೋರಾಗೇ ಕೇಳುತ್ತಿತ್ತು.



ಒಂಟಿಯಾಗಿ ಮೇಯುತ್ತಿದ್ದ ಹೊಸೆಮ್ಮೆಗೆ ಹೊಂಚಾಕಿ ಪೊದರಿನಿಂದ ಚಂಗನೆ ಎಗುರಿತು ಚಿರತೆ. ಬೆನ್ನಿನ ಮೇಲೆ ಎರಗಿದ ಚಿರತೆಯಿಂದ ಗಾಬರಿಗೊಂಡು, ಅದರಿಂದ ತಪ್ಪಿಸ್ಸಿಕೊಳ್ಳಲು ತಲೆ ಕೊಡವುತ್ತಾ ನಾಗಾಲೋಟದಲ್ಲಿ ಓಡಿದ ಹೊಸೆಮ್ಮೆಗೆ ಎದುರಾದ ಸಣ್ಣ ಹಳ್ಳವನ್ನು ದಾಟುವಾಗ, ಬೆನ್ನಿನ ಮೇಲೆ ಸವಾರಿ ಮಾಡುತ್ತಿದ್ದ ಚಿರತೆಯು ಇಡತ ತಪ್ಪಿ ಹೊಸೆಮ್ಮೆಯ ಕಮಾನು ಕೊಂಬಿನ ಮಧ್ಯೆ ತೂರಿ ತಗಲಿಕ್ಕಿಕೊಂಡಿತು.

ಮೊದಲೇ ಚಿರತೆಯ ವಾಸನೆಯನ್ನು ಅರಿತು ತಲೆಬಗ್ಗಿಸಿ ಗುಂಪಗೆ ನಿಂತಿದ್ದ ಇತರ ಎಮ್ಮೆಗಳೆಲ್ಲಾ, ತಲೆಯಮೇಲೆ ಚಿರತೆಯನ್ನು ಹೊತ್ತು ತರುತ್ತಿದ್ದ ಹೊಸೆಮ್ಮೆನ್ನು ಕಂಡು ಕಖಮುಖಗೊಂಡು ಚದುರಿದವು. ಹೊಸೆಮ್ಮೆಯು ಚಿರತೆಯಿಂದ ತಪ್ಪಿಸಿಕೊಳ್ಳಲು ತಲೆಯಮೇಲಿದ್ದ ಚಿರತೆಯ ಸಮೇತ ತಾರೆಮರದ ಬುಡಕ್ಕೆ ಬಲವಾಗಿ ಒಂದು ಡಿಚ್ಚಿ ಕೊಟ್ಟಿತು.

ಕೊಂಬಿನ ಮಧ್ಯ ಸಿಕ್ಕಾಕಿಕೊಂಡಿದ್ದ ಚಿರತೆಗೆ ಬಲವಾದ ಒಡೆತ ಬಿದ್ದು ಒದ್ದಾಡಲಾರಂಬಿಸಿದಾಗ ಹೊಸೆಮ್ಮೆ ಮತ್ತೆ ಮತ್ತೆ ಹಿಂದಕ್ಕೋಗೀ ಬಂದೂ ಮರಕ್ಕೆ ಗುದ್ದುತ್ತಿತ್ತು. ಹಾಗಾಗ ತಲೆಯನ್ನು ಒದರಿದ್ದರಿಂದ, ಕೊಂಬಿನಿಂದ ಕಳಚಿಕೊಂಡು ಅರೆಜೀವವಾದ ಚಿರತೆ, ದೂರದಲ್ಲಿ ಪ್ರೇಕ್ಷಕರಂತೆ ನಿಂತಿದ್ದ ಇತರ ಎಮ್ಮೆಗಳ ಬಳಿ ಬಂದು ಬಿದ್ದು ಒದ್ದಾಡತೊಡಗಿತು.

ಹೊಸೆಮ್ಮೆಯ ಸಾಹಸವನ್ನು ಕಂಡಿದ್ದೇ ತಡ ಇತರ ಎಮ್ಮೆಗಳ ಜೀನ್ಸ್‌ನಲ್ಲಿ ಸುಪ್ತವಾಗಿ ಅಡಗಿದ್ದ ಹಲವು ಮಿಲಿಯನ್ ವರ್ಷಗಳ ಜೀವರಕ್ಷಣಾ ಅನುಭವವೆಲ್ಲಾ ಕ್ಷಣದಲ್ಲಿ ಜಾಗೃತವಾಗಿ, ಎಲ್ಲಾ ಎಮ್ಮೆಗಳೂ ತಲೆತಗ್ಗಿಸಿ, ಕಿವಿನಿಮಿರಿಸಿ, ಕಣ್ ಅರಳಿಸಿ , ಬುಸುಗುಟ್ಟಿ, ಕಾಲಿನಿಂದ ನೆಲದ ಮಣ್ಣನ್ನು ಕೆರೆದು , ತಪ್ಪಿಸಿಕೊಳ್ಳಲು ತೆವಳುತ್ತಿದ್ದ ಆಜನ್ಮಶತ್ರು ಚಿರತೆಯ ಮೇಲೆ ಎರಗಿ ಹೊಸೆಮ್ಮೆಗೆ ಸಾಥ್ ನೀಡಲು ನಿಂತವು. ಕಬ್ಬಾ ತಟ್ಟೋ ಆಚಾರಿ ಕಾದ

ಕಬ್ಬಿಣಕ್ಕೆ ತನ್ನ ಸಹಾಯಕನೊಡನೇ ಹಿಂದಿಂದೇನೇ. . ಸುತ್ತಿಗೆ ಏಟು ಕೊಡುವಂತೆ , ಒಂದಾದಾ ಮೇಲೆ ಒಂದರಂತೆ ಎಲ್ಲಾ ಎಮ್ಮೆಗಳೂ ಒಂದೇ ರಿದಮ್ಮಿನಲ್ಲಿ ಚಿರತೆಗೆ ಎಷ್ಟರ ಮಟ್ಟಿಗೆ ಗುದ್ದಿದವೆಂದರೇ, ಮರಿಗನಿಗೆ ತನ್ನ ಚಿಕ್ಕಮಗಾ ಮೂಕ್ರಾಣಿ ಹಿಡಿದು ಕಟ್ಟಾಕೋ ಸಾಧು ಎಮ್ಮೆಗಳಾ ಇವು? ಎಂದು ಅನುಮಾನ ಬಂದು , ಹೆಗಲ ಮೇಲಿದ್ದ ಟವಲ್ಲನ್ನು ಬಾಯಿಗಿಕ್ಕಿ ಕೊಂಡ!.

ಚಿರತೆಯ ಅಲುಗಾಟ ನಿಲ್ಲುವವರಿಗೂ ಗುದ್ದಿದ್ದ ಎಮ್ಮೆಗಳು, ಅದರ ಮೂಗಿನ ಬಳಿ ಮೂಸಿ ಉಸಿರಾಟ ಕಂಡುಬಂದರೆ, ಮತ್ತೆ ಬಲವಾದ ಗುದ್ದು ಕೊಟ್ಟು ಕೊಲ್ಲುತ್ತಿದ್ದವು. ಗುಂಪೆಮ್ಮೆಗಳ ಕುಮ್ಮಾಟದಲ್ಲಿ ಸತ್ತ ಮಟ್ಗನ ಕಳೇಬರ ಕಳ್ಳು ಪಚ್ಚೆ ಚಯ್ಡ ಎಲ್ಲಾ ಚಿಂದಿ ಚಿಂದಿಯಾಗಿ ಹೋಯ್ತು.

ಗುಂಪಿನ ಅತಿ ಸಣ್ಣ ಪಡ್ಡೆಯೂ ಸಹ ಅದರ ಅಮ್ಮನೊಂದಿಗೇ ತಾನೂ ಸತ್ತ ಚಿರತೆಗೆ ಗುದ್ದಿ ತನ್ನ ರೋಷ ತೀರಿಸಿ ಕೊಂಡಿತು.

ಈ ರುದ್ರವನ್ಯ ನಾಟಕವನ್ನು ನೋಡುತ್ತಾ ಹಾವುಬಂಡೆಯ ಮೇಲೆ ನಿಂತಿದ್ದ ಮರಿಗನಿಗೆ ಹಾಲು ಕರೆಯಲು ವತ್ತಾದರೂ ಎಮ್ಮೆಗಳಿಗೆ ಕೊಪವಿಳಿದು ತಣ್ಣವಾಗುವ ವರಿಗೂ ಕಾದು, ಅಲ್ಲಿಂದಲೇ

“ವಯ್ಯೋ ವಯ್.

ಏಯ್ ಬಾ-ಇತ್ತಾ. . . .!” ಎಂದು ಹಲವು ಬಾರಿ ಕೂಗಿ ಕರೆದು ಬುಲಾವ್ ಕೊಟ್ಟು ಅಟ್ಟಿಕೊಂಡು ಮನೆಗೆ ಬಂದು, ಯಾರಿಗೂ ಸದ್ದು ಸುದ್ದು ಬಿಡದೇ, ಭೀಮಕ್ಕನ ಗಂಡನೊಡನೆ, ಸತ್ತು ಚಿಂದಿಯಾದ ಚಿರತೆಯ ಕಾಲುಗುರುಗಳನ್ನು ಕುಡುಗೋಲಿನಿಂದ ಕಿತ್ತು, ಅಂಗೈ ಅಗಲದ ಚಿರತೆಯ ಚರ್ಮವನ್ನು ತನ್ನ ಹೊಸೆಮ್ಮೆಯ ಸಾಹಸದ ನೆನಪಿಗಾಗಿ ಕೊಯ್ದು ತಂದು ಒಣಗಿಸಿ ಕಬ್ಬಿಣದಪೆಟ್ಟಿಯಲ್ಲಿ ಮಡಗಿದ್ದಾನೆ.

ಈಗಾಗಲೇ ಏಳು ಹೆಣ್ಣು ಕರುಗಳನ್ನು ಈದಿರುವ ಹೊಸೆಮ್ಮೆಯೇ ಮರಿಗನಿಗೆ ಅಚ್ಚು ಮೆಚ್ಚು. ಕೆರೆಯ ಮಧ್ಯದಲ್ಲಿ ಗುಂಪಿನ ನಾಯಕಿಯಾಗಿ ನೀರಿನಲ್ಲಿ ಮೂತಿ ಮಾತ್ರ ನೆನೆಯುದಂತೆ ಮೇಲೆಬಿಟ್ಟು ಕಣ್ಮುಚ್ಚಿ ಶೈತ್ಯಲಾಭ ಪಡೆಯುತ್ತಿರುವ ಹೊಸೆಮ್ಮೆಯನ್ನು ನೀವು ಈಗಲೂ ಅತ್ತಿಮರದಳ್ಳದಲ್ಲಿ ಈಗಲೂ ಕಾಣಬಹುದು. ಒಡೆಯನಕೆರೆ ಬಳಿ ಹಕ್ಕಿ ಫೋಟೋ ತೆಗೆಯುವಾಗ ಹೊಂಗೆಮರದ ನೆರಳಿನಲ್ಲಿ ಕುಳಿತ ಮರಳುಪಾರ್ಟಿ ಮರಿಗನು ತೆರೆದಿಟ್ಟ ಹೊಸೆಮ್ಮೆಯ ಸಾಹಸಕತೆ ಕೇಳಿ ನಾವೂ ಮರುಳಾದೆವು.



– ಶಂಕರಪ್ಪ.ಕೆ.ಪಿ

ಬೆಟ್ಟದ ಮಲ್ಲಿಗೆ

ಮಲ್ಲಿಗೆ ಬಳ್ಳಿ ಇರಲ್ಲಿ
ಇದ್ದರೆ ಫಲ ಹೆಚ್ಚು
ಎತ್ತರದ ಹಚ್ಚ ಹಸಿರು
ಮೊಸರಿನ ಬಣ್ಣ ಹೆಚ್ಚು

ಮಲ್ಲಿಗೆಯ ಮೊಗ್ಗರಳಿ
ಸುವಾಸನೆಯು ಚೆಲಿತ್ತು
ಮುಂಜಾನೆಯ ಮಂಜಿನಲ್ಲಿ
ಹನಿ ಹನಿಯಾದ ಹೂದೋಟದಲ್ಲಿ

ಹತ್ತಿರದ ದುಂಬಿಯೊಂದು
ಮಲ್ಲಿಗೆಗೆ ಮುತ್ತಿಟ್ಟು
ಮಕರಂದ ಹೀರುತಿತ್ತು
ಸುವಾಸನೆಯ ಅಂಚಿನಲ್ಲಿ

ಘಮ ಘಮಿಸುವ ಮೊಗ್ಗು
ಇದುವೆ ಬೆಟ್ಟದ ಮಲ್ಲಿಗೆ
ಇದುವೆ ಮೈಸೂರು ಮಲ್ಲಿಗೆ
ಸುವಾಸನೆಯ ಮಲ್ಲಿಗೆ.



- ಅಶ್ವಥ .ಕೆ.ಎನ್